**DAY & DATE: SATURDAY, JUNE 21st, 2025**

**Matter: Silver Jubilee Celebrations**

**As appeared in the Newspapers:**

**VIJAYAVANI**
(Page No. 9)

ವಿಜಯವಾಣಿ
ನಂ.1 ಕನ್ನಡ ದಿನಪತ್ರಿಕೆ

ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಉಪಸ್ಥಿತಿ | ಆರ್.ಅಶೋಕ್‌ಗೆ ಸನ್ಮಾನ

# ಬಿಎನ್‌ಎಂಐಟಿಗೆ ರಜತ ಸಂಭ್ರಮ




ವಿಜಯವಾಣಿ ಚಿತ್ರ

ಬಿಎನ್‌ಎಂಐಟಿ ಕಾಲೇಜಿನಲ್ಲಿ ಆಯೋಜಿಸಿದ್ದ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರನ್ನು ಗೌರವಿಸಲಾಯಿತು. ಡಾ. ಎಸ್. ವಿದ್ಯಾಶಂಕರ್, ಅಶೋಕ್ ಆರ್. ಮಾನೆ, ಜಿ.ಎನ್. ಕೃಷ್ಣಮೂರ್ತಿ, ಈಶ್ವರ ಎನ್. ಮಾನೆ ಮತ್ತಿತರರು ಉಪಸ್ಥಿತರಿದ್ದರು.

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಜನರು ಆಸ್ತಿ ಗಳಿಸಿ ಶ್ರೀಮಂತರಾದರೆ ಏನೂ ಪ್ರಯೋಜನ ಇಲ್ಲ. ಹೃದಯ ಶ್ರೀಮಂತಿಕೆ ಇರಬೇಕು. ಮಾನವೀಯತೆ ರೂಢಿಸಿಕೊಳ್ಳಬೇಕು ಎಂದು ಹರಿಹರಪುರದ ಆದಿ ಶಂಕರಾಚಾರ್ಯ ಶ್ರೀ ಶಾರದಾ ಶ್ರೀಲಕ್ಷ್ಮಿ ನರಸಿಂಹ ಪೀಠದ ಪೀಠಾಧಿಪತಿ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಹೇಳಿದ್ದಾರೆ.

ಬಿಎನ್‌ಎಂಐಟಿ ಕಾಲೇಜಿನಲ್ಲಿ ಆಯೋಜಿಸಿದ್ದ ರಜತ ಮಹೋತ್ಸವ ಉದ್ಘಾಟಿಸಿ ಮಾತನಾಡಿದರು. ಉಸಿರು ಇರುವಾಗ ಹೆಸರು ಮಾಡಬೇಕು. ಬದುಕಿದ್ದಾಗ ಜನರು ನೀಡುವಂತಹ ಕಾರ್ಯ ಮಾಡದಿದ್ದಲ್ಲಿ, ಬದುಕಿಗೆ ಸಾರ್ಥಕತೆ ಸಿಗುವುದಿಲ್ಲ. ಸಾವು ಎಂಬುದು ಆಕಸ್ಮಿಕ. ಹೀಗಾಗಿ ಸದಾ ಸಕಾರಾತ್ಮಕವಾಗಿರಬೇಕು. ಬೇರೆ ಜನರಿಗೆ ಒಳ್ಳೆಯದನ್ನೇ ಬಯಸಬೇಕು ಎಂದರು.

ಪ್ರಕೃತಿ ವಿರುದ್ಧವಾಗಿ ನಾವು ನಡೆಯಬಾರದು. ಪ್ರಕೃತಿ ನಮಗೆ ಏನೆಲ್ಲ ನೀಡಿದೆ. ಅದನ್ನು ಉಳಿಸುವ ಬೆಳೆಸುವ ಕೆಲಸ ನಮ್ಮಿಂದ ಆಗಬೇಕು. ಮನುಷ್ಯರು ಮೊದಲು ತಮ್ಮ ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸಬೇಕು. ಇದರಲ್ಲಿ ನೀವು ಯಶಸ್ಸು ಕಂಡರೆ, ಜೀವನದಲ್ಲಿ ಯಶಸ್ಸು ಕಂಡಂತೆ ಎಂದು ಹೇಳಿದರು. ಕೆಲವರಿಗೆ ಮಾತನಾಡುವುದೇ ಒಂದು ಸಾಧನೆ ಎಂದು ಭಾವಿಸುತ್ತಾರೆ. ಇದು ತಪ್ಪು. ನಾವು ಮಾಡಿದ ಸಾಧನೆ ಬಗ್ಗೆ ಜನರು ಮಾತನಾಡಬೇಕು ಅದು ನಿಜವಾದ ಸಾಧನೆ ಎಂದರು. ವಿದ್ಯಾದಾನಕ್ಕಿಂತ ಮಿಗಿಲಾಗಿದ್ದು ಬೇರೆ ಏನಿದೆ? ಮಾನೆ ಕುಟುಂಬಕ್ಕೆ ಮತ್ತಷ್ಟು ಸಮಾಜಕಾರ್ಯ ಮಾಡುವ ಶಕ್ತಿ ನೀಡಲಿ ಎಂದು ಶುಭ ಹಾರೈಸಿದರು.

> ಹಲವಾರು ವ್ಯಕ್ತಿಗಳ ಪ್ರೇರಣೆ ಪೂರಕವಾಗಿ ಇಂದು ಬಿಎನ್ ಎಂಐಟಿ ಈ ಎತ್ತರಕ್ಕೆ ಬೆಳೆದಿದೆ. ಈ ಸಂಸ್ಥೆಯ ಗುಣಮಟ್ಟಕ್ಕೆ ಇಲ್ಲಿನ ಬೋಧಕರು ಮತ್ತು ಬೋಧಕೇತರ ಸಿಬ್ಬಂದಿ ಕೊಡುಗೆ ಕೂಡ ಮರೆಯುವಂತಿಲ್ಲ. ಸಂಸ್ಥೆಯನ್ನು ಶಿಸ್ತುಬದ್ಧವಾಗಿ ಕಟ್ಟಿದ್ದಾರೆ.
>
> | **ಡಾ. ಎಸ್. ವಿದ್ಯಾಶಂಕರ್** ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಕುಲಪತಿ

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಸಂಸ್ಥೆ ಉಪಾಧ್ಯಕ್ಷ ಅಶೋಕ್ ಆರ್. ಮಾನೆ, ಉಪ ನಿರ್ದೇಶಕ ಡಾ. ಜಿ.ಎನ್. ಕೃಷ್ಣಮೂರ್ತಿ, ಡೀನ್ ಈಶ್ವರ ಎನ್. ಮಾನೆ, ಅಧ್ಯಕ್ಷ ನಾರಾಯಣ ರಾವ್ ಆರ್. ಮಾನೆ, ಹೆಚ್ಚುವರಿ ನಿರ್ದೇಶಕ ಮತ್ತು ಪ್ರಾಂಶುಪಾಲ ಎಸ್.ವೈ. ಕುಲಕರ್ಣಿ, ನಿರ್ದೇಶಕ ಟಿ.ಜೆ ರಾಮಮೂರ್ತಿ ಇತರರಿದ್ದರು.